	Mangalore.				
23.	Ramesh Rai, Badaganooru Post, Mangalore.	Uppundha	33-1A	2	50

CATEGORY - II

Big/Progressive entrepreneurs

1.	Messrs. Canara Aqua Farms (Sri. Channarabata) 2-100, Kodhooru Kundapura	Thokooru	141	10	60
2.	M.Chandrasekhara Bolara Mangalore	-do-	141	10	00
3.	Captain K. Sathynarayana Hegde Kukkeballi Udupi Taluk	Thookoru	141	10	00
4.	Sujith S. Ammen Dhashirama Banaje Udupi,	Thokooru	141	10	00
5.	Edward. P. Loowis 6-12, 7, Vivekananda Nagar, Kodikal Mangalore.	Paduvari	256-1	10	00
6.	Messrs Monodana Farms Lim. Sabhapathi Enterprises Badagupete Udupi	Thokooru	141	10	00
7.	Ashwini Kumar Rai Jodumarga Bhuntwal Taluk			10	00

ರಾಜ್ಯದ ವಿಶ್ವವಿದ್ಯಾನಿಲಯಗಳಲ್ಲಿನ ಪರೀಕ್ಷಾ ನಿಯಮಾವಳಿಗಳಲ್ಲಿನ ವ್ಯತ್ಯಾಸ

405 - ಶ್ರೀ ಪಿ. ಬಸವರಾಜ್ : ಮಾನ್ಯ ಉನ್ನತ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದ ಎಲ್ಲಾ ವಿಶ್ವವಿದ್ಯಾನಿಲಯಗಳಲ್ಲಿ ಏಕರೂಪದ ಪರೀಕ್ಷಾ ನಿಯಮಾವಳಿಗಳು ಜಾರಿಯಲ್ಲಿವೆಯೇ? ಇಲ್ಲವಾದಲ್ಲಿ ಕಾರಣ ಏನು.

ಆ) ಮಂಗಳೂರು ವಿಶ್ವವಿದ್ಯಾನಿಲಯದ ಇಂಜಿನೀಯರಿಂಗ್ ವಿದ್ಯಾರ್ಥಿಗಳು ನಾಲ್ಕಕ್ಕಿಂತ ಹೆಚ್ಚು ವಿಷಯಗಳಲ್ಲಿ ಅನುತ್ತೀರ್ಣರಾದರೆ ಮುಂದಿನ ವರ್ಷದ ವ್ಯಾಸಂಗಕ್ಕೆ ಅನರ್ಹತೆಯನ್ನು ಹೊಂದುವುದು ನಿಜವೇ.

ಇ) ಬೆಂಗಳೂರು ವಿಶ್ವವಿದ್ಯಾನಿಲಯದಲ್ಲಿ ಎಷ್ಟೇ ವಿಷಯಗಳಲ್ಲಿ ಅನುತ್ತೀರ್ಣರಾದರೂ ಮುಂದಿನ ವರ್ಷ ವ್ಯಾಸಂಗಕ್ಕೆ ಅರ್ಹತೆಯನ್ನು ಹೊಂದುವುದು ನಿಜವೇ?

ಈ) ಹಾಗಿದ್ದಲ್ಲಿ ವಿಶ್ವವಿದ್ಯಾನಿಲಯಗಳಲ್ಲಿನ ಪರೀಕ್ಷಾ ನಿಯಮಗಳ ವ್ಯತ್ಯಾಸದಿಂದಾಗಿ ವ್ಯಾಸಂಗದ ವರ್ಷವು ನಷ್ಟವಾಗುವುದರ ಜೊತೆಗೆ ಪಾಲಕರು ಮತ್ತು ವಿದ್ಯಾರ್ಥಿಗಳು ಮಾನಸಿಕಕ್ಕೊಳಗಾಗುವುದು ಸರಕಾರದ ಗಮನಕ್ಕೆ ಬಂದಿದೆಯೇ?

ಉ) ಹಾಗಿದ್ದಲ್ಲಿ ಇಂಥ ಎಲ್ಲಾ ಅನರ್ಥಗಳನ್ನು ತಪ್ಪಿಸಲು ಎಲ್ಲಾ ವಿಶ್ವವಿದ್ಯಾನಿಲಯಗಳಲ್ಲಿ ಒಂದೇ ರೂಪದ ನೀತಿ ನಿಯಮಾವಳಿಗಳನ್ನು ಜಾರಿಗೆ ತಂದು ಅಸಮತೆಯನ್ನು ನಿವಾರಿಸಲು ಸರಕಾರವು ಕ್ರಮ ಕೈಗೊಳ್ಳುವುದೇ?

ಶ್ರೀ ಎಸ್.ಎಂ. ಯಾಹ್ಯಾ (ಉನ್ನತ ಶಿಕ್ಷಣ ಸಚಿವರು) :

ಅ) ಇಲ್ಲ. ವಿಶ್ವವಿದ್ಯಾಲಯಗಳು ಸ್ವಾಯತ್ತ ಸಂಸ್ಥೆಗಳಾಗಿದ್ದು, 1976ರ ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳು ಅಧಿನಿಯಮದ 39ನೇ ಪ್ರಕರಣದಲ್ಲಿ ಪರಿನಿಯಮಗಳನ್ನು ಪ್ರತಿಯೊಂದು ವಿಶ್ವವಿದ್ಯಾಲಯವು ರಚಿಸಲು ಸಕ್ಷಮ ಪ್ರಾಧಿಕಾರವಾಗಿರುವುದರಿಂದ.

ಆ) ಹೌದು.

ಇ) ಆರು ವಿಷಯಗಳಲ್ಲಿ ಇಂಜಿನಿಯರಿಂಗ್ ವಿದ್ಯಾರ್ಥಿಗಳು ಅನುತ್ತೀರ್ಣರಾದರೂ ಮುಂದಿನ ವರ್ಷದ ವ್ಯಾಸಂಗಕ್ಕೆ ಅರ್ಹತೆ ಹೊಂದಲು ಅವಕಾಶವಿದೆ.

ಈ) ಅಂತರ ವಿಶ್ವವಿದ್ಯಾಲಯ ಮಂಡಳಿಯ ಸಭೆಯಲ್ಲಿ ತೀರ್ಮಾನಿಸಿದಂತೆ ಪ್ರತಿಯೊಂದು ವಿಶ್ವವಿದ್ಯಾಲಯದಲ್ಲಿ ಅಸ್ತಿತ್ವದಲ್ಲಿರುವ ಪ್ರತಿಯೊಂದು ಕೋರ್ಸಿಗೆ ಏಕಸ್ವಾಮ್ಯದ ಪಠ್ಯಕ್ರಮವನ್ನು ನಿರೂಪಿಸುವ ಹಿನ್ನೆಲೆಯಲ್ಲಿ ವಿಷಯವಾರು ತಜ್ಞರ ಸಮಿತಿಗಳನ್ನು ರಚಿಸಲಾಯಿತು. ಸಮಿತಿಯ ವರದಿಯನ್ನು ಮಂಡಳಿಯ ಸಭೆಯಲ್ಲಿ ವಿಶ್ಲೇಷಿಸಿ ಅಂಗೀಕರಿಸಿದ ನಂತರ ಅವುಗಳನ್ನು ಅಳವಡಿಸಿಕೊಳ್ಳಲು ಎಲ್ಲಾ ವಿಶ್ವವಿದ್ಯಾಲಯಗಳಿಗೆ ಪರಿಚಲಿಸಲಾಗಿದೆ.

ಉಡುಪಿ ತಾಲ್ಲೂಕ್ ಹಂಗಾರಕಟ್ಟೆ ಬೆಂಗ್ರೆಯಲ್ಲಿ ಕಡವು ಸೇವೆ ಖಾಯಂಗೊಳಿಸುವ ಕುರಿತು

572 - ಶ್ರೀ ಪಿ. ಬಸವರಾಜ್ (ಬ್ರಹ್ಮಾವರ್) : ಮಾನ್ಯ ಮೀನುಗಾರಿಕೆ ಮತ್ತು ಬಂದರು ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಉಡುಪಿ ತಾಲ್ಲೂಕು ಹಂಗಾರಕಟ್ಟೆ ಬೇಂಗ್ರೆಯಲ್ಲಿ ಕಡವು ಸೇವೆ ಯಾವಾಗ ಪ್ರಾರಂಭವಾಯಿತು, ಸದರಿ ಕಡವು ಸೇವೆಯನ್ನು ಹಂಗಾಮಿಯಾಗಿಯೇ ಉಳಿಸಿರುವುದರಿಂದ ಸಾರ್ವಜನಿಕರಿಗೆ ಮತ್ತು ಸಿಬ್ಬಂದಿಗಳಿಗೆ ಅನಾನುಕೂಲತೆಯುಂಟಾಗಿರುವುದು ಸರಕಾರದ ಗಮನಕ್ಕೆ ಬಂದಿದೆಯೇ?

ಆ) ಬಂದಿದ್ದಲ್ಲಿ, ಕಡವು ಸೇವೆಯನ್ನು ಖಾಯಂಗೊಳಿಸುವಲ್ಲಿ ಕೂಡಲೇ ಕ್ರಮ ಕೈಗೊಳ್ಳಲಾಗುವುದೇ?

ಶ್ರೀ ವಸಂತ ವಿ. ಸಾಲಿಯಾನ್ (ಮೀನುಗಾರಿಕೆ ಮತ್ತು ಬಂದರು ಸಚಿವರು):

ಅ) ದಿ: 1-4-1976ರಿಂದ, ಹಂಗಾರಕಟ್ಟೆ, ಬೇಂಗ್ರೆ ಕಡವು ಸೇವೆ ಪ್ರಾರಂಭವಾಯಿತು.

ಸದರಿ ಕಡಲ ಸೇವೆಯನ್ನು ಹಂಗಾಮಿಯಾಗಿಯೇ ಉಳಿಸಿರುವುದರಿಂದ ಸಾರ್ವಜನಿಕರಿಗೆ ಏನು ತೊಂದರೆಯಾಗಿರುವುದಿಲ್ಲ. ಕಡವು ಸೇವೆಯನ್ನು ಮುಂದುವರಿಸಲು ಆದೇಶ ಪ್ರಾಪ್ತವಾಗಲು ವಿಳಂಬವಾದ ಸಂದರ್ಭಗಳಲ್ಲಿ ಸಿಬ್ಬಂದಿಯವರಿಗೆ ವೇತನ ಪಡೆಯುವಲ್ಲಿ ಅನಾನುಕೂಲವಾಗಿರುವ ವಿಷಯ ಗಮನಕ್ಕೆ ಬಂದಿದೆ.

ಆ) ಪರಿಶೀಲನೆಯಲ್ಲಿದೆ.